**<u>ದಿನಾಂಕಃ20.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ದಾವಾ ಸ್ವತ್ತುಗಳು ಗೋವಿಂದೇಗೌಡ ಉಃ ಗೋವಿಂದಯ್ಯ ಇವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ ಖರೀದಿಸಿರುವ ಆಸ್ತಿಗಳು. ಸದರಿ ಗೋವಿಂದೇಗೌಡ ಉಃ ಗೋವಿಂದಯ್ಯ ರವರು ಅವರ ಜೀವಿತ ಕಾಲದಲ್ಲಿ ಪ್ರತಿವಾದಿ 2 ರಿಂದ 4 ರವರ ಹೆಸರಿಗೆ ನೊಂದಾಯಿತ ಮರಣ ಶಾಸನ ಪತ್ರವನ್ನು ಮಾಡಿರುತ್ತಾರೆ ಎಂದರೆ ಸುಳ್ಳು . ಸದರಿ ಗೊವಿಂದಯ್ಯ ರವರ ನೊಂದಾಯಿತ ಮರಣ ಶಾಸನ ಪತ್ರದ ಪ್ರಕಾರ ಪ್ರತಿವಾದಿ 2 ರಿಂದ 4 ರವರು ಗೋವಿಂದೇಗೌಡ ಉಃ ಗೋವಿಂದಯ್ಯ ಮರಣಾ ನಂತರ ತಮ್ಮ ಹೆಸರಿಗೆ ಆಸ್ತಿಯ ಖಾತೆಗಳನ್ನು ಬದಲಾಯಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ಸದರಿ ಗೋವಿಂದಯ್ಯ ಎಂದರೆ ನಮ್ಮ ತಂದೆ 2 ನೇ ಪ್ರತಿವಾದಿಗೆ ಸರ್ವೆ ನಂಬರ್ಃ 6/3 ರಲ್ಲಿ 1 ಎಕರೆ 13 ಗುಂಟೆ, ಸರ್ವೆ ನಂಬರ್ಃ 2/4 ಎ ರಲ್ಲಿ 7 ಗುಂಟೆ ಹಾಗೂ 3 ನೇ ಪ್ರತಿವಾದಿಗೆ ಸರ್ವೆ ನಂಬರ್ಃ 6/4 ರಲ್ಲಿ 30 ಗುಂಟೆ, 4 ನೇ ಪ್ರತಿವಾದಿಗೆ ಸರ್ವೆ ನಂಬರ್ಃ 6/9 ರಲ್ಲಿ 31 ಗುಂಟೆ ಆಸ್ತಿಯನ್ನು ವಿಲ್ ಪತ್ರದ ಮುಖಾಂತರ ನೀಡಿರುತ್ತಾರೆ ಆದ ಕಾರಣ ಪ್ರತಿವಾದಿ 2 ರಿಂದ 4 ರವರೆ ಸದರಿ ಆಸ್ತಿಗಳ ಹಕ್ಕುಬದ್ಧ ಮಾಲೀಕರಾಗಿರುತ್ತಾರೆ ಎಂದರೆ ಸುಳ್ಳು. 6 ಜನ ಹೆಣ್ಣು ಮಕ್ಕಳಿಗೆ ಏನನ್ನೂ ಕೊಡದೆ ಪ್ರತಿವಾದಿ 2 ರಿಂದ 4 ರವರು ಸೃಷ್ಟಿ ಮಾಡಿಕೊಂಡಿರುತ್ತಾರೆ ನಮ್ಮ ತಂದೆಯವರು ಹುಷಾರಿಲ್ಲದೆ ತೀರಿಕೊಂಡಿರುತ್ತಾರೆ. ವಿಲ್ ಪತ್ರದಲ್ಲಿ ನನ್ನ ತಂದೆಯವರು 4 ನೇ ವಾದಿ ಲಕ್ಷ್ಮಿದೇವಿ, 5 ನೇ ವಾದಿ ಪ್ರೇಮ, 4 ನೇ ಪ್ರತಿವಾದಿ ವಿಶ್ವನಾಥ ಇವರುಗಳ ವಿವಾಹ ಮಾಡುವ ಜವಾಬ್ದಾರಿಯನ್ನು 2 ನೇ ಪ್ರತಿವಾದಿಗೆ ವಹಿಸಿರುತ್ತಾರೆ ಎಂದರೆ ಸುಳ್ಳು. ಆ ಪ್ರಕಾರವಾಗಿ 2 ನೇ

ಪ್ರತಿವಾದಿ ವಿಲ್ ಪತ್ರದ ಅನುಸಾರ 4 ನೇ ವಾದಿ ಲಕ್ಷ್ಮಿದೇವಿ, 5 ನೇ ವಾದಿ ಪ್ರೇಮ, 4 ನೇ ಪ್ರತಿವಾದಿ ವಿಶ್ವನಾಥ ಇವರುಗಳ ವಿವಾಹವನ್ನು ತನ್ನ ಖರ್ಚಿನಿಂದ ಮಾಡಿರುತ್ತಾನೆ ಎಂದರೆ ಸುಳ್ಳು. ದೊರೆಸ್ವಾಮಿಯೇ ಮದುವೆ ಮಾಡಿರುತ್ತಾನೆ ಎಂದರೆ ಸರಳವಾಗಿ ಮದುವೆ ಮಾಡಿರುತ್ತಾನೆ ಯಾರಿಗೂ ಏನನ್ನೂ ಕೊಟ್ಟಿರುವುದಿಲ್ಲ. ದೊರರೆಸ್ವಾಮಿ ನನ್ನ ಮತ್ತು ಪ್ರೇಮ ರವರ ಮದುವೆಯನ್ನು ವಿಜೃಂಬಣೆಯಿಂದ ಮಾಡಿ ಕೊಡಬೇಕಾದ ವರದಕ್ಷಿಣೆಯನ್ನು ಚಿನ್ನಾಭರಣಗಳನ್ನು ನಗದನ್ನು ಕೊಟ್ಟು ವಿವಾಹ ಮಾಡಿಸಿರುತ್ತಾರೆ ಎಂದರೆ ಸುಳ್ಳು. ದಾವಾ ಆಸ್ತಿಗಳು ನಮ್ಮ ತಂದೆ ಗೋವಿಂದೇಗೌಡ ಉಃ ಗೋವಿಂದಯ್ಯ ರ ಸ್ವಯಾರ್ಜಿತ ಆಸ್ತಿಗಳಾಗಿರುವ ಕಾರಣ ನಮಗ್ಯಾರಿಗೂ ದಾವಾ ಸ್ವತ್ತುಗಳಲ್ಲಿ ಹಕ್ಕು ಇಲ್ಲ ಎಂದರೆ ಸುಳ್ಳು. ದಾವಾ ಆಸ್ತಿಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳಲ್ಲ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ 3 ನೇ ಪ್ರತಿವಾದಿ ಜಗದೀಶ್ ಎಂಬುವರು ಪಾಪಣ್ಣಿ ಎಂಬುವವರಿಗೆ ಕ್ರಮ ಸಂ 3 ರ ಸ್ವತ್ತಿನಲ್ಲಿ 2 ಗುಂಟೆಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಈಗ ನೀವು ಹೇಳಿದಾಗ ಗೊತ್ತಾಗಿರುತ್ತದೆ. ಈ ಬಗ್ಗೆ ನನಗೆ ಮೊದಲೇ ಗೊತ್ತಾಗಿರುತ್ತದೆ ಎಂದರೆ ಸುಳ್ಳು ಆದರೂ ನಾನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸುಳ್ಳು, ಈಗ ನನಗೆ ಗೊತ್ತಾಗಿರುತ್ತದೆ. ದಾವಾ ಆಸ್ತಿಯಲ್ಲಿ ಮನೆ ಇರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನಾಗಲೀ ನನ್ನ ಸಹೋದರಿಯರಾಗಲೀ ಯಾರೂ ಯಾವತ್ತೂ ಸ್ವಾದೀನಾನುಭದಲ್ಲಿ ಇಲ್ಲ ನಮ್ಮ ನಮ್ಮ ಗಂಡಂದಿರ ಮನೆಯಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 2 ರಿಂದ 4 ನೇ ಪ್ರತಿವಾದಿಯರ ಸಂಪೂರ್ಣ ಮಾಲೀಕತ್ವ ಹಾಗೂ ಹಕ್ಕು ಸ್ವಾದೀನಕ್ಕೆ ಒಳಪಟ್ಟಿರುತ್ತದೆ ಎಂದರೆ

ಸುಳ್ಳು.  ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ರೀತಿಯ ಹಕ್ಕು ಇಲ್ಲದೇ ಇದ್ದರೂ ಸಹ ಸುಳ್ಳು ಸಂಗತಿಗಳ ಮೇಲೆ ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಸ್ವಯಾರ್ಜಿತ ಆಸ್ತಿಯಾಗಿರುವ ಕಾರಣ ಹೆಣ್ಣು ಮಕ್ಕಳಾದ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ